ಪೊಲೀಸ ಖಾತೆಯ ಅಮಲದಾರರಿಗೆ ಸೂಚನೆಗಳು.

ಪೊಲೀಸ ಖಾತೆಯವರು ಗ್ರಾಮಸುಧಾರಣೆಗೆ ಸಂಬಂಧಿಸಿದಂಥ ಶಾಸ್ತ್ರೀಯ ಸ್ವರೂಪದ ಬಾಬತುಗಳಲ್ಲಿ ಯಾವದೇ ಯೋಗ್ಯ ಸಹಾಯವನ್ನು ಮಾಡುವ ಪರಿಸ್ಥಿತಿಯಲ್ಲಿರುವರೆಂದು ಆಶಿ ಮಾಡಲಿಕ್ಕಾಗುವದಿಲ್ಲ, ಮತ್ತು ಇದಲ್ಲದೆ, ಇತ್ತೀಚೆಗಿನ ವರ್ಷಗಳಲ್ಲಿ ಪೊಲೀಸ ಠಾಣೆಗಳನ್ನು ಮತ್ತು ಆವುಟ-ಪೋಸ್ಟುಗಳನ್ನು ಕಡಿಮೆ ಮಾಡಿದ್ದರಿಂದ ಮತ್ತು ತಿರುಗಾಡುವ ಕಾವಲಿನ ಪದ್ಧತಿಯನ್ನು ಕಡಿಮೆ ಮಾಡಿದ್ದರಿಂದ, ಹಳ್ಳಿಗಳ ಕ್ಷೇತ್ರಗಳಿಂದ ಜಿಲ್ಲಾ ಪೊಲೀಸರನ್ನು ಹಿಂತೆಗೆಯಲಾಗಿದೆ, ಮತ್ತು ಇದರಿಂದ ಗ್ರಾಮಗಳಲ್ಲಿಯ ಸಮಾಜಗಳೊಡನೆ ಇರುವ ವ್ಯವಹಾರವು ಅದೇ ಪ್ರಮಾಣದಲ್ಲಿ ಬಂದ ಆಗಿದೆ.

ಆದ್ದರಿಂದ, ಈ ಯೋಜನೆಗೆ ಸಾಕಷ್ಟು ಸಹಾಯ ಮಾಡಲಿಕ್ಕೆ ಪೊಲೀಸ ಅಮಲದಾರರಿಗೆ ಬಹಳ ಪ್ರಸಂಗಗಳು ಬರುವದಿಲ್ಲ. ಆದಾಗ್ಯೂ, ಯಾವತ್ತು ದರ್ಜೆಯ ಅಮಲದಾರರು ಸಹಾನುಭೂತಿಯ ಭಾವನೆಯಿಂದ ಈ ಯೋಜನೆಯ ಉದ್ದೇಶವನ್ನು ಮುಂದರಿಸಲಿಕ್ಕೆ ಪ್ರಯತ್ನ ಮಾಡಬೇಕಾಗುವಂಥ ಪ್ರಸಂಗಗಳು ಬಂದೇ ಬರುವವು.

ಜಿಲ್ಲಾ ಪೊಲೀಸ ಸುಪರಿಂಟಿಂಡೆಂಟರು ಮತ್ತು ಸಬ್-ಡಿವಿಜನಲ್ ಅಮಲದಾರರು ಫಿರತಿಯ ಮೇಲಿದ್ದಾಗ್ಗೆ, ಅಥವಾ ಗುನ್ಹೆಯ ಚೌಕಶಿಯ ಬಗ್ಗೆ ಹೋದಾಗ್ಗೆ; ಡಿವಿಜನಲ್ ಇನ್‌ಸ್ಪೆಕ್ಟರರು ಮತ್ತು ಸಬ್-ಇನ್‌ಸ್ಪೆಕ್ಟರರು ಸಾಮಾನ್ಯ ಗುನ್ಹೆಗಳ ಚೌಕಶಿಯ ಕೆಲಸದ ಮೇಲೆ ನೇಮಿಸಲ್ಪಟ್ಟಾಗ್ಗೆ, ಮತ್ತು ಗ್ರಾಮಗಳಲ್ಲಿ ಸಮನುಗಳನ್ನು ಬಜಾಯಿಸುವ ಕಾನ್‌ಸ್ಟೆಬಲನು ಸಹ, ಗ್ರಾಮಸುಧಾರಣೆಯ ಕೆಲಸದಲ್ಲಿ ಚಿಕಿತ್ಸಾ ಬುದ್ಧಿಯನ್ನು ತೋರಿಸಿ ಮತ್ತು ತಮಗೆ ಸಂಬಂಧವುಂಟಾದ ಗ್ರಾಮನಿವಾಸಿಗಳಿಗೆ ಈ ಯೋಜನೆಯ ಲಾಭಗಳನ್ನು ತಿಳಿಸಿ ಹೇಳಿ ಈ ಸತ್ಕಾರ್ಯಕ್ಕೆ ತಕ್ಕ ಮಟ್ಟಿಗೆ ಸಹಾಯ ಮಾಡಬಹುದು.